

## ಯುವಕರ ಕಳಕಳಿ

ಪ್ರೌಢವಯಸ್ಕರು ಭವಿಷ್ಯದ ಬಗ್ಗೆ ಚಿಂತಿಸುವುದನ್ನು ನಾವು ನೋಡಿದ್ದೇವೆ, ಕೇಳಿದ್ದೇವೆ. ಸಾಮಾನ್ಯವಾಗಿ ವಯಸ್ಸಾಗುತ್ತಾ ಹೋದಂತೆಲ್ಲ ನಿರಾಶಾವಾದದ ಕಾರ್ಮೋಡ ಮನಸ್ಸನ್ನು ಹೆಚ್ಚು ಮುಸುಕುತ್ತ ಹೋಗುವುದು. ಆಶೋತ್ತರಗಳ ಭಗ್ನಾವಶೇಷದ ಮೇಲೆ ಹತಾಶರಾಗಿ ಸಾವನ್ನೇ ನಿರೀಕ್ಷಿಸುತ್ತ ಹೇಗೋ ಕಾಲವನ್ನು ತಳ್ಳುತ್ತ ಬಾಳುವ ಮುದುಕರನೇಕರನ್ನು ನಾವು ನೋಡಿದ್ದೇವೆ. ಆದರೆ ಕೌಮಾರಾವಸ್ಥೆಯಲ್ಲಿರುವವರೇ 'ಮುಂದೇನಪ್ಪ' ಎಂದು ಚಿಂತಿಸುವುದು ತುಂಬ ಅಪರೂಪದ ಸಂಗತಿ. ನವ ಉತ್ಸಾಹದಿಂದ ಕುದಿಯುತ್ತಿರಬೇಕಾದ ಯುವಕರು ಈ ರೀತಿ ಚಿಂತಿಸುವಂತಹ ಪರಿಸ್ಥಿತಿ ಬಂದಿರುವುದು ತುಂಬ ಶೋಚನೀಯ.

ನವದೆಹಲಿಯ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ (CMS) ನವರು ನಡೆಸಿದ ಎಂಟು, ಒಂಭತ್ತು ಮತ್ತು ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಣೆಯ ಫಲಿತಾಂಶದ ಪ್ರಕಾರ ವಿದ್ಯಾರ್ಥಿಗಳು ಮುಂದೆ ಸಂಘರ್ಷ ಮತ್ತು ಹಿಂಸೆಗಳು ಹೆಚ್ಚುವುದೆಂದೂ ಭವಿಷ್ಯಜೀವನ ಹೆಚ್ಚು ಗೊಂದಲಮಯವಾಗುವುದೆಂದೂ ಭಾವಿಸುತ್ತಾರೆಂಬುದು ತಿಳಿದುಬಂದಿದೆ. ನೈತಿಕ ಮೌಲ್ಯಗಳು ಅತ್ಯಾವಶ್ಯಕವೆಂದು ಅವರು ಭಾವಿಸುತ್ತಿದ್ದಾರೆ. ಶಿಸ್ತು ಮತ್ತು ಪ್ರಾಮಾಣಿಕತೆಗಳನ್ನು ಅಳವಡಿಸಿಕೊಳ್ಳುವ ತುರ್ತು ಅಗತ್ಯವನ್ನು ಅವರು ಹೆಚ್ಚು ಮನಗಾಣುತ್ತಿರುವರು.

ಶಾಲೆಗೆ ಹೋಗುವ ಮಕ್ಕಳಲ್ಲಿ, ಅವರ ತಂದೆತಾಯಿಗಳಿಗಿಂತ ಜಾಸ್ತಿಯಾಗಿ, ಟಿ.ವಿ.ಯಿಂದಾಗುವ ಸತ್ ಮತ್ತು ದುಷ್ಪರಿಣಾಮಗಳ ಬಗ್ಗೆ ಹೆಚ್ಚು ಕಾಳಜಿ ಇರುವುದು ಕಂಡುಬಂದಿದೆ. ಬೇರೆಲ್ಲಕ್ಕಿಂತ ಜಾಸ್ತಿಯಾಗಿ ಟಿ.ವಿ.ಯೇ ಅವರ ಜೀವನವನ್ನು ಹೆಚ್ಚು ರೂಪಿಸುತ್ತಿರುವಂತೆ ಕಂಡುಬರುತ್ತಿದೆ. ಅವರಲ್ಲಿ ಹೆಚ್ಚು ಮಂದಿ ಟಿ.ವಿ.ಗೆ ಬದಲಾಗಿ ಹೊರಗಡೆ ಓಡಾಡುವುದು, ಬೇರೆ ಬೇರೆ ಸ್ಥಳಗಳಿಗೆ ಭೇಟಿ ನೀಡುವುದು, ಆಟವಾಡುವುದು ಒಳ್ಳೆಯದೆಂದು ಭಾವಿಸುತ್ತಾರೆ.

ತಂದೆತಾಯಿಗಳಿಗೆ ಇರಬೇಕಾದ ವಿವೇಕ ಮಕ್ಕಳಿಗಾದರೂ ಬರುತ್ತಿರುವುದು ತುಂಬ ಸಂತೋಷದ ವಿಷಯ. ತಂದೆತಾಯಿಗಳಿಗೆ ಮಕ್ಕಳೇ ಟಿ.ವಿ.ಸಂಸ್ಕೃತಿ ಬೇಡವೆಂದು ಕಿವಿಮಾತು ಹೇಳುವಂತಾಗಿರುವುದು ಸೋಜಿಗವಾದರೂ ಸಂತೋಷದ ವಿಷಯ. ಇದನ್ನು ತಂದೆತಾಯಿಗಳು ಕಿವಿಗೆ ಹಾಕಿಕೊಳ್ಳುತ್ತಾರೆಯೇ? ಅವರಿಗೆ ಮಕ್ಕಳ ಭವಿಷ್ಯಕ್ಕಿಂತ ಸಾಮಾಜಿಕ ಘನತೆ, ಸಂಪತ್ತು ಇತ್ಯಾದಿಗಳೇ ಮುಖ್ಯವಾದರೆ ಮಕ್ಕಳೆ ತಮ್ಮ ಭವಿಷ್ಯವನ್ನು ನೋಡಿಕೊಳ್ಳಬೇಕಾಗುತ್ತದೆ. ಹಿರಿಯರು ಕಿರಿಯರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಮುಂದೆ ಹಿರಿಯರು ಕಿರಿಯರ ಪಾಲಿಗೆ 'ಕಿರಿಕಿರಿ'ಯಾಗುವುದರಲ್ಲಿ ಯಾವ ಸಂದೇಹವಿದೆ? ❖

## ವಿಶ್ವಕುಟುಂಬ

ಇಂದಿನ ದಿನಗಳಲ್ಲಿ ಜಾಗತೀಕರಣದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಬಾಹ್ಯ ಸಂಸ್ಕೃತಿ, ವಾಣಿಜ್ಯ ಮುಂತಾದುವುಗಳ ವಿಷಯದಲ್ಲಿ ಜಾಗತೀಕರಣವಾಗುವುದಕ್ಕಿಂತ ಮಾನವ ಹೃದಯದಲ್ಲಿ ಈ ಜಾಗತೀಕರಣ ಉಂಟಾಗಬೇಕು. ಅಂದರೆ ನಮ್ಮ ಮನೋಭಾವದಲ್ಲಿ ಈ ಬದಲಾವಣೆ ಆಗಬೇಕು. ಜನಾಂಗೀಯ, ರಾಷ್ಟ್ರೀಯ, ಧಾರ್ಮಿಕ, ಪ್ರಾಂತೀಯ ಮುಂತಾದ ಭೇದಭಾವಗಳನ್ನು ತೊರೆದು ನಾವು ವಿಶ್ವಕುಟುಂಬಿಗಳಾಗಬೇಕು.

ಇತ್ತೀಚಿನ ಸಂಶೋಧನೆಗಳೂ ಇದಕ್ಕೆ ಪೂರಕವಾಗಿರುವಂತೆ ಕಂಡುಬರುತ್ತದೆ. ಇಡೀ ಜಗತ್ತಿನ ಮಾನವರೆಲ್ಲರೂ ೬೦,೦೦೦ ವರ್ಷಗಳ ಹಿಂದೆ ಆಫ್ರಿಕಾದಲ್ಲಿ ವಾಸಿಸುತ್ತಿದ್ದ ಒಬ್ಬ ಮಾನವನಿಂದ ಬಂದವರೆಂದು ಡಾ. ಸ್ಪೆನ್ಸರ್ ವೆಲ್ಸ್ ಅಭಿಪ್ರಾಯಪಡುತ್ತಾರೆ. ಅಂದರೆ ನಮ್ಮ ಪುರಾಣದ ಮನು ಆಫ್ರಿಕದವನೆ? ಅಥವಾ ಆಡಂ ನಿಜವಾಗಿಯೂ ಇದ್ದನೆ? ಈಡನ್ ಗಾರ್ಡನ್ ಆಫ್ರಿಕಾದಲ್ಲಿತ್ತೆ? ಈ ಪ್ರಶ್ನೆಗಳಿಗಿಂತ ಮುಖ್ಯವಾದ ವಿಷಯವೇನೆಂದರೆ ನಾವೆಲ್ಲ ಮೂಲತಃ ಒಂದೇ ಬುಡಕಟ್ಟಿನಿಂದ ಬಂದವರು. ಜನಾಂಗೀಯ ವ್ಯತ್ಯಾಸಗಳು ಕೇವಲ ಚರ್ಮದಾಳ(skin deep) ಎಂದು ಅವರು ಅಭಿಪ್ರಾಯಪಡುತ್ತಾರೆ. ಮಾನವನಲ್ಲಿರುವ DNA ನಾವೆಲ್ಲರೂ ಒಂದೇ ವಂಶದಿಂದ ಬಂದವರೆಂದು ತೋರಿಸುತ್ತದಂತೆ. ನಮ್ಮ ಮೂಲವಂಶಸ್ಥರು ಆಫ್ರಿಕಾ ನಿವಾಸಿಗಳು. ಅವರು ಹಲವಾರು ಕಾರಣಗಳಿಂದಾಗಿ ಜಗತ್ತಿನ ಬೇರೆ ಬೇರೆ ಭಾಗಗಳಿಗೆ ವಲಸೆ ಹೋದರು. ಡಾ. ವೆಲ್ಸ್ ಹೇಳುತ್ತಾರೆ: "ನಮ್ಮೆಲ್ಲರಲ್ಲೂ ಒಂದೊಂದು ಇತಿಹಾಸ ಪುಸ್ತಕವಿದೆ, ಮತ್ತು ಅದು ನಮ್ಮೊಳಗಿರುವ ಜೀನು(genes)ಗಳಲ್ಲಿ ಬರೆಯಲ್ಪಟ್ಟಿದೆ. ಈ ಪುಸ್ತಕ ಹೇಳುವ ಮೊಟ್ಟ ಮೊದಲನೆಯ ಅಂಶವೇ ನಾವು ಮೂಲತಃ ಆಫ್ರಿಕನರು ಎಂಬುದು."

ನೀಗ್ರೋಗಳಲ್ಲಿ ಪ್ರಚಲಿತವಿರುವ ಒಂದು ಕಥೆ ಇದೆ. ಪ್ರಾರಂಭದಲ್ಲಿ ಮಾನವರೆಲ್ಲರೂ ಕಪ್ಪಗಿದ್ದರು. ಒಮ್ಮೆ ದೇವರು ಒಬ್ಬ ವ್ಯಕ್ತಿಗೆ ಕರೆ ಕಳಿಸಿದ. ಅವನು, ತನ್ನ ಯಾವುದೊ ತಪ್ಪಿಗಾಗಿ ಶಿಕ್ಷೆ ವಿಧಿಸಲು ದೇವರು ತನ್ನನ್ನು ಕರೆಸುತ್ತಿರಬೇಕೆಂದು ತೀವ್ರ ಭಯದಿಂದ ತಲ್ಲಣಿಸತೊಡಗಿದ, ಮತ್ತು ಆ ಭಯದಿಂದ ಅವನ ಮೈಯೆಲ್ಲ ಬಿಳಿಚಿಕೊಂಡಿತು. ಅವನಿಂದ ಹುಟ್ಟಿದವರೇ ಬಿಳಿಯ ಜನಾಂಗದವರು. **ಮೇಲಿನ ಸಂಶೋಧನೆ ಈ ಕಥೆಯನ್ನು ಸಮರ್ಥಿಸುತ್ತದೆಯೇ?** ಸ್ವಾಮಿ ವಿವೇಕಾನಂದರನ್ನು ಕುರಿತಾದ ಅಮೆರಿಕದ ಒಂದು ವರದಿ ಹೀಗೆ ಹೇಳುತ್ತದೆ: "ಸಮುದ್ರದ ಆಚೆಗಿರುವ ನಮ್ಮ ಎಲ್ಲ ನೆರೆಹೊರೆಯವರೂ, ತುಂಬ ಮೂಲೆಯಲ್ಲಿರುವವರೂ ಕೂಡ, ನಮ್ಮ ಬಂಧುವರ್ಗದವರು. ಬಣ್ಣ, ಭಾಷೆ ಮತ್ತು ಆಚರಣೆಗಳಲ್ಲಿ ಎಲ್ಲೋ ಸ್ವಲ್ಪ ವ್ಯತ್ಯಾಸವಿದೆ ಅಷ್ಟೆ, ಎಂಬುದನ್ನು ವಿವೇಕಾನಂದರು ನಿರ್ಣಾಯಕವಾಗಿ ಪ್ರಮಾಣೀಕರಿಸಿದರು." ❖

❖